63 ಸಂಭ್ರಮ 1959-2022

# ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ
# Karnataka State Financial Corporation

ಸಂಸ್ಥೆಯ ಅಧ್ಯಕ್ಷರಾದ

**ಶ್ರೀ ಐ.ಎಸ್.ಎನ್. ಪ್ರಸಾದ್,** ಭಾ.ಆ.ಸೇ.

ದಿನಾಂಕ 15ನೇ ಜುಲೈ 2022ರಂದು ಸಂಸ್ಥೆಯ
63ನೇ ವಾರ್ಷಿಕ ಮಹಾಸಭೆಯಲ್ಲಿ ಮಾಡಿದ ಭಾಷಣ















**ಉದ್ಯಮಶೀಲತೆ ಅಭಿವೃದ್ಧಿಗೆ 63 ವರ್ಷಗಳ ಸುದೀರ್ಘ ಸೇವೆ**

**63 years accomplished service for entrepreneurship development**



ಶ್ರೀ ಐ ಎಸ್ ಎನ್ ಪ್ರಸಾದ್, ಭಾ.ಆ.ಸೇ.
ಅಧ್ಯಕ್ಷರು

**Sri I S N PRASAD,** IAS
Chairman

## ಶ್ರೀ ಐ ಎಸ್ ಎನ್ ಪ್ರಸಾದ್, ಭಾ.ಆ.ಸೇ.
## ಅಧ್ಯಕ್ಷರು
## ದಿನಾಂಕ 15ನೇ ಜುಲೈ 2022ರಂದು ಸಂಸ್ಥೆಯ 63ನೇ ವಾರ್ಷಿಕ ಮಹಾಸಭೆಯಲ್ಲಿ ಮಾಡಿದ ಭಾಷಣ

**ಆತ್ಮೀಯ ಷೇರುದಾರರೇ,**

ಸಂಸ್ಥೆಯ 63ನೇ ವಾರ್ಷಿಕ ಮಹಾಸಭೆಗೆ ತಮಗೆಲ್ಲಾ ಸ್ವಾಗತ ಬಯಸಲು ಹರ್ಷವಾಗುತ್ತಿದೆ. 31ನೇ ಮಾರ್ಚ್ 2022ಕ್ಕೆ ಅಂತ್ಯಗೊಂಡ ಸಂಸ್ಥೆಯ ಕಾರ್ಯಾಚರಣೆಯ 63ನೇ ವಾರ್ಷಿಕ ವರದಿ ಹಾಗೂ ಪರಿಶೋಧಿಸಲ್ಪಟ್ಟ ಲೆಕ್ಕಪತ್ರಗಳನ್ನು ಮಂಡಿಸಲು ನನಗೆ ಹರ್ಷವಾಗುತ್ತದೆ.

ಪ್ರಸಕ್ತ 2021–22ನೇ ಸಾಲಿನ ಆರ್ಥಿಕ ಸ್ಥಿತಿಯನ್ನು ಕ್ರೋಢೀಕರಿಸಲಾಗಿದ್ದು, ತೆರಿಗೆ ಪೂರ್ವ ರೂ.107.33 ಕೋಟಿಗಳ ದಾಖಲೆ ಲಾಭವನ್ನು ಗಳಿಸಿದೆ ಹಾಗೂ ರೂ.66.61 ಕೋಟಿಗಳ ನಿವ್ವಳ ಲಾಭವನ್ನು ಗಳಿಸಿದೆ. ಸಂಸ್ಥೆಯ ನಿರ್ದೇಶಕರ ಮಂಡಳಿಯ 63ನೇ ವಾರ್ಷಿಕ ವರದಿ ಮತ್ತು 31ನೇ ಮಾರ್ಚ್ 2022ಕ್ಕೆ ಅಂತ್ಯಗೊಂಡ ಲೆಕ್ಕಪತ್ರದ ವಿವರಗಳನ್ನು ತಮಗೆಲ್ಲರಿಗೂ ಈಗಾಗಲೇ ತಲುಪಿಸಲಾಗಿದ್ದು, ತಾವೆಲ್ಲರೂ ಅದನ್ನು ಪರಾಮರ್ಶಿಸಿದ್ದೀರೆಂದು ಭಾವಿಸಿದ್ದೇನೆ. ಆದಾಗ್ಯೂ 2021–22ರಲ್ಲಿ ಸಂಸ್ಥೆಯ ಪ್ರಗತಿಯ ಪ್ರಮುಖ ಅಂಶಗಳನ್ನು ಪರಿಶೀಲಿಸುವ ಮುನ್ನ ಜಾಗತಿಕ, ರಾಷ್ಟ್ರ ಹಾಗೂ ರಾಜ್ಯದ ಆರ್ಥಿಕತೆಯ ಪಕ್ಷಿ ನೋಟವನ್ನು ಪರಾಮರ್ಶಿಸಬಹುದು.

**ಜಾಗತಿಕ ಆರ್ಥಿಕ ನೋಟ :**

ಜಾಗತಿಕ ಆರ್ಥಿಕ ಮಟ್ಟದಲ್ಲಿ ಮುಂದುವರಿದ ಕೋವಿಡ್ ಉಲ್ಬಣಗಳು, ಕಡಿಮೆಯಾದ ಹಣಕಾಸಿನ ಬೆಂಬಲ ಮತ್ತು ದೀರ್ಘಕಾಲದ ಪೂರೈಕೆ ಅಡಚಣೆಗಳ ಪ್ರತಿಬಿಂಬದಿಂದ 2020–21ರಲ್ಲಿ ಅಂದಾಜು ಮಾಡಿದ ಜಾಗತಿಕ ಬೆಳವಣಿಗೆಯ ಅಂದಾಜು 5.5 ಪ್ರತಿಶತಕ್ಕೆ ಮರುಕಳಿಸಿದರೂ 2022ರಲ್ಲಿ 4.1 ಪ್ರತಿಶತಕ್ಕೆ

ಗಮನಾರ್ಹವಾಗಿ ಕ್ಷೀಣಿಸುತ್ತದೆಂದು ನಿರೀಕ್ಷಿಸಲಾಗಿದೆ. ಜಾಗತಿಕ ಮಟ್ಟದಲ್ಲಿ ಸಾಂಕ್ರಾಮಿಕ ಪುನರುತ್ಥಾನದ ಪರಿಣಾಮದಿಂದ ಕಡಿಮೆ ಆಹಾರಧಾನ್ಯಗಳ ಉತ್ಪಾದನೆಯಿಂದ ಕಡಿಮೆ ಪೂರೈಕೆಗೆ ಕಾರಣವಾಗಿದೆ. ಇದರಿಂದ ಪ್ರಸ್ತುತ ಬೆಳವಣಿಗೆಯ ದೃಷ್ಟಿಕೋನವು ದುರ್ಬಲವಾಗಿದೆ ಮತ್ತು ಜಾಗತಿಕ ಹಣದುಬ್ಬರವು ಹಿಂದಿನ ವರ್ಷದ ಅಂದಾಜಿಗಿಂತ ಗಮನಾರ್ಹವಾಗಿ ಹೆಚ್ಚಿದೆ.

80 ವರ್ಷಗಳ ಅಭಿವೃದ್ಧಿಯ ನಂತರ ಕೋವಿಡ್–19ರ ಪರಿಣಾಮದಿಂದ ಜಾಗತಿಕ ಬೆಳವಣಿಗೆಯು 2021ರಲ್ಲಿ 5.5 ಪ್ರತಿಶತಕ್ಕೆ ಏರಿದೆಯೆಂದು ಅಂದಾಜಿಸಲಾಗಿದೆ. ಈ ಬೆಳವಣಿಗೆಯಿಂದ ಅನೇಕ ದೇಶಗಳಲ್ಲಿ ಸಾಂಕ್ರಾಮಿಕ ಸಂಬಂಧಿತ ಲಾಕ್‌ಡೌನ್‌ಗಳ ಸಡಿಲಿಕೆಯ ಪ್ರಕ್ರಿಯೆಯು ಹೆಚ್ಚಾಗಿ ಕಂಡುಬಂದಿದೆ. ಕೋವಿಡ್–19ರ ಸಾಂಕ್ರಾಮಿಕ ಮತ್ತು ವ್ಯಾಪಕವಾದ ಅಗತ್ಯ ವಸ್ತುಗಳ ಪೂರೈಕೆ ಅಡಚಣೆಗಳ ಪುನರುತ್ಥಾನಗಳು ಕಳೆದ ಹಣಕಾಸು ವರ್ಷದ ದ್ವಿತೀಯ ಅರ್ಧದಲ್ಲಿ ಜಾಗತಿಕ ಆರ್ಥಿಕ ಚಟುವಟಿಕೆಗಳ ಮೇಲೆ ಗಮನಾರ್ಹವಾಗಿ ಪರಿಣಾಮ ಬೀರಿದೆ.

**ಭಾರತೀಯ ಆರ್ಥಿಕ ನೋಟ:**

ಭಾರತೀಯ ಆರ್ಥಿಕತೆ 2021ರ ಒಟ್ಟು ರಾಷ್ಟ್ರೀಯ ಉತ್ಪನ್ನವು ದ್ವಿತೀಯ ಅರ್ಧದಿಂದ ನಿರಂತರ ಚೇತರಿಕೆ ಕಂಡಿದೆ. ಏಪ್ರಿಲ್–ಜೂನ್ 2021ರಲ್ಲಿ ಕೋವಿಡ್–19 2ನೇ ಅಲೆಯ ಪ್ರಭಾವವು ಆರೋಗ್ಯ ಕ್ಷೇತ್ರದ ಮೇಲೆ ಹೆಚ್ಚು ತೀವ್ರವಾಗಿದ್ದರೂ ಹಿಂದಿನ ವರ್ಷದ ಲಾಕ್‌ಡೌನ್ ಪರಿಣಾಮಕ್ಕೆ ಹೋಲಿಸಿದರೆ ಆರ್ಥಿಕ ಅಭಿವೃದ್ಧಿಯ ಮೇಲೆ ಹೆಚ್ಚಿನ ಪರಿಣಾಮ ಬೀರಲಿಲ್ಲ.

ಒಟ್ಟು ರಾಷ್ಟ್ರೀಯ ಉತ್ಪನ್ನ (ಜಿಡಿಪಿ) ಬೆಳವಣಿಗೆಯು 2021–22ನೇ ಸಾಲಿನಲ್ಲಿ ಶೇ.9.2ರಷ್ಟು ವಿಸ್ತರಣೆಯನ್ನು ದಾಖಲಿಸುತ್ತದೆಯೆಂದು ಅಂದಾಜು ಮಾಡಲಾಗಿದೆ. ಇದರಿಂದಾಗಿ ರಾಷ್ಟ್ರೀಯ ಆರ್ಥಿಕ ಉತ್ಪಾದನೆಯ ಮಟ್ಟವು ಕೋವಿಡ್–19ರ ಪೂರ್ವದಲ್ಲಿದ್ದ ಆರ್ಥಿಕ ಸ್ಥಿತಿಯ ಮಟ್ಟವನ್ನು ಮೀರಿಸುತ್ತದೆಂದು ಅಂದಾಜಿಸಲಾಗಿದೆ.

ಕೋವಿಡ್–19ರ ಸಾಂಕ್ರಾಮಿಕವು ಕೃಷಿವಲಯದ ಮೇಲೆ ಹೆಚ್ಚಿನ ಪರಿಣಾಮ ಬೀರಲಿಲ್ಲ. ಆದ್ದರಿಂದ ಹಣಕಾಸು ವರ್ಷ 2020–21ರಲ್ಲಿ ಶೇ.3.6 ರಿಂದ

2021–22ರಲ್ಲಿ ಶೇ.3.9ರಷ್ಟು ಬೆಳವಣಿಗೆ ಕಾಣಬಹುದೆಂದು ಅಂದಾಜಿಸಲಾಗಿದೆ. ಕೈಗಾರಿಕಾ ವಲಯವು ಹಣಕಾಸು ವರ್ಷ 2020–21ರಲ್ಲಿ ಶೇ.7ಕ್ಕೆ ಕುಂಠಿತವಾದ ಬೆಳವಣಿಗೆಯು ಹಣಕಾಸು ವರ್ಷ 2021–22ರಲ್ಲಿ 11.8ಕ್ಕೆ ಏರಿಕೆಯಾಗಿದೆ. ಉತ್ಪಾದನೆ, ನಿರ್ಮಾಣ ಮತ್ತು ಗಣಿಗಾರಿಕೆ, ಉಪವಲಯಗಳೂ ರಾಷ್ಟ್ರೀಯ ಒಟ್ಟು ಉತ್ಪನ್ನಕ್ಕೆ ಶೇ.28.2 ರಷ್ಟು ಕೊಡುಗೆ ನೀಡಿದೆ. ಭಾರತೀಯ ಆರ್ಥಿಕ ಚಟುವಟಿಕೆಯಲ್ಲಿ ಸೇವಾ ಕ್ಷೇತ್ರ ವಲಯದ ಕೊಡುಗೆಯು ಅರ್ಧಕ್ಕಿಂತ ಹೆಚ್ಚು ಭಾಗವನ್ನು ಹೊಂದಿದೆ ಮತ್ತು ವಿಶೇಷವಾಗಿ ಮಾನವ ಸಂಪನ್ಮೂಲ ಕೋವಿಡ್–19ರ ಸಂಬಂಧಿತ ಚಟುವಟಿಕೆಗಳು ಹೆಚ್ಚು ಪ್ರಭಾವಿತವಾಗಿ ಕೊಡುಗೆ ನೀಡಿದೆ.

ಒಟ್ಟಾರೆ ಸೇವಾಕ್ಷೇತ್ರ ವಲಯವು 2020–21ರಲ್ಲಿ ಶೇ.8.4ರಷ್ಟು ಬೆಳವಣಿಗೆಯನ್ನು ಕಂಡು, ಹಣಕಾಸು ವರ್ಷ 2021–22ರಲ್ಲಿ ಶೇ.8.2ಕ್ಕೆ ಕುಸಿದಿದೆ ಇದರಿಂದಾಗಿ ಇತರೆ ವಿವಿಧ ಉಪವಲಯಗಳ ಕಾರ್ಯಕ್ಷಮತೆಯು ಕುಂಠಿತವಾಗುವ ಸಂಭವವಿದೆ.

**ಕರ್ನಾಟಕ ಆರ್ಥಿಕತೆ :**

ಕರ್ನಾಟಕ ರಾಜ್ಯವು ಮಾಹಿತಿ ತಂತ್ರಜ್ಞಾನ, ಸಮಾಜ ಕಲ್ಯಾಣ, ಸಾಮಾಜಿಕ ಲಿಂಗ ಸಮಾನತೆ ಮತ್ತು ತಾಂತ್ರಿಕ ಅವಿಷ್ಕಾರಗಳನ್ನು ಬೆಂಬಲಿಸುತ್ತಾ ರಾಜ್ಯದ ಅಭಿವೃದ್ಧಿಗೆ ಪ್ರಾಮುಖ್ಯತೆ ನೀಡಿದೆ. ಕರ್ನಾಟಕ ರಾಜ್ಯದ ಒಟ್ಟು ಉತ್ಪನ್ನ (ಜಿ.ಎಸ್.ಡಿ.ಪಿ)ಯು ಹಣಕಾಸು ವರ್ಷ 2020–21ರಲ್ಲಿ ಅಂದಾಜಿಸಲಾದ ಮೊತ್ತವು 17.31 ಲಕ್ಷ ಕೋಟಿ ರೂ.ಗಳಿಂದ ಹಣಕಾಸು ವರ್ಷ 2021–22ರಲ್ಲಿ 20.50 ಲಕ್ಷ ಕೋಟಿ ರೂ.ಗಳಿಗೆ ಹೆಚ್ಚಿಸಲಾಗಿದೆ. ರಾಜ್ಯವು ಭಾರತದ ರಾಷ್ಟ್ರೀಯ ಒಟ್ಟು ಉತ್ಪನ್ನಕ್ಕೆ ರೂ. 232.15 ಕೋಟಿಗಳ ಕೊಡುಗೆ ನೀಡಿ, ಶೇ.8.80 ಪಾಲು ಹೊಂದಿದೆ. ರಾಷ್ಟ್ರೀಯ ಆರ್ಥಿಕತೆಯ ಶೇ.–3ಕ್ಕೆ ಹೋಲಿಸಿದರೆ ರಾಜ್ಯವು ಹಣಕಾಸು ವರ್ಷ 2021–22ರಲ್ಲಿ ಶೇ.7.2 ರಷ್ಟು ಅಭಿವೃದ್ಧಿ ಕಂಡುಬಂದಿದೆ.

ಒಟ್ಟಾರೆ ರಾಜ್ಯದ ಆಂತರಿಕ ಉತ್ಪನ್ನಕ್ಕೆ (GSDP) ಕೃಷಿ ವಲಯದ ಕೊಡುಗೆಯು 2020–21ಕ್ಕೆ ಹೋಲಿಸಿದರೆ 2021–22ರಲ್ಲಿ ಶೇ.14.30 ರಿಂದ ಶೇ.14.10ಕ್ಕೆ ಕನಿಷ್ಠ ಇಳಿಕೆ ಕಂಡಿದೆ. ಕೈಗಾರಿಕೆ ವಲಯವು 2020–21ಕ್ಕೆ ಹೋಲಿಸಿದರೆ 2021–22ರಲ್ಲಿ ಶೇ.19.40 ರಿಂದ ಶೇ.19.80 ಅಲ್ಪ ಏರಿಕೆ ಕಂಡಿದೆ. ರಾಜ್ಯದ ಒಟ್ಟು ಆಂತರಿಕ ಉತ್ಪನ್ನ

(GSDP) ಅತಿದೊಡ್ಡ ಅಂಶವಾಗಿರುವ ಸೇವಾ ವಲಯದ ಕೊಡುಗೆ 2020–21ರಲ್ಲಿ ಶೇ.66.30 ರಿಂದ 2021–22ರಲ್ಲಿ ಶೇ.66.10ಕ್ಕೆ ಕನಿಷ್ಟ ಇಳಿಕೆ ಕಂಡಿದೆ. ಹಣಕಾಸು ವರ್ಷ 2021–22ರಲ್ಲಿ ರಿಯಲ್ ಎಸ್ಟೇಟ್, ವೃತ್ತಿಪರ ಸೇವೆಗಳ ಕೊಡುಗೆಯು (ಶೇ.33.21), ಉತ್ಪನ್ನ ವಲಯವು (ಶೇ.12.52), ವ್ಯಾಪಾರ ಮತ್ತು ದುರಸ್ಥಿ ಸೇವೆಗಳು (ಶೇ.11.55), ಗಳಷ್ಟು ಒಟ್ಟು ಸೇವಾ ವಲಯದಲ್ಲಿ ಪಾಲು ಹೊಂದಿದೆ.

ಪ್ರಸಕ್ತ ಬೆಲೆಗಳಲ್ಲಿ 2020–21 ಸಾಲಿನಲ್ಲಿ ರಾಜ್ಯದ ನಿವ್ವಳ ತಲಾ ಆದಾಯವು ರೂ.2,36,451 ಗಳಷ್ಟಿದ್ದು, ಈ ಮೊತ್ತವು 2021–22ನೇ ಸಾಲಿಗೆ ಶೇ.17.9 ರಷ್ಟು ಹೆಚ್ಚಳದೊಂದಿಗೆ ರೂ.2,78,786/–ಗಳಷ್ಟು ಆಗಬಹುದೆಂದು ಅಂದಾಜಿಸಲಾಗಿದೆ. ಕರ್ನಾಟಕ ರಾಜ್ಯದ ತಲಾ ಆದಾಯವು ಅಖಿಲ ಭಾರತದ ತಲಾ ಆದಾಯಕ್ಕಿಂತ ಹೆಚ್ಚಿದೆ.

ಹಣಕಾಸು ವರ್ಷ 2021–22ರ (ಸೆಪ್ಟೆಂಬರ್ 2021ರ ರವರೆಗೆ) ರಾಜ್ಯದ ಒಟ್ಟು ರಫ್ತು ಮೌಲ್ಯವು ರೂ.4,30,343/– ಕೋಟಿ ಗಳಾಗಿರುತ್ತದೆ. ರಾಜ್ಯದ ಎಲೆಕ್ಟ್ರಾನಿಕ್ ಮತ್ತು ಕಂಪ್ಯೂಟರ್ ಸಾಫ್ಟ್‌ವೇರ್ ರಫ್ತು ಮೌಲ್ಯವು ಶೇ.20.21ರಷ್ಟಾಗಿರುತ್ತದೆ.

ಪ್ರಸಕ್ತ ವರ್ಷ 2021–22ರಲ್ಲಿ ರಾಜ್ಯದ ಏಕಗವಾಕ್ಷಿ ಯೋಜನಾ ಮಂಜೂರಾತಿ ಸಮಿತಿಯ ಮೂಲಕ ರಾಜ್ಯವು ಬಂಡವಾಳವನ್ನು ಆಕರ್ಷಿಸುತ್ತಿದೆ. ಪ್ರಸಕ್ತ ವರ್ಷದಲ್ಲಿ 447 ಯೋಜನೆಗಳಿಂದ 21,321.95 ಕೋಟಿ ರೂ.ಗಳ ಮೊತ್ತದ ಉದ್ದೇಶಿತ ಬಂಡವಾಳ ಹೂಡಿಕೆಗೆ ಅನುಮೋದನೆ ನೀಡಿದೆ. ಈ ಕೈಗಾರಿಕಾ ಯೋಜನಗಳಿಂದ ಸುಮಾರು 1,22,403 ಉದ್ಯೋಗಾವಕಾಶ ಸೃಷ್ಟಿಯಾಗಲಿದೆ.

ರಾಜ್ಯದ ಉನ್ನತ ಮಟ್ಟದ ಯೋಜನಾ ಮಂಜೂರಾತಿ ಸಮಿತಿಯು 13 ಬೃಹತ್ ಕೈಗಾರಿಕಾ ಯೋಜನೆಗಳಿಂದ 35,906.11 ಕೋಟಿ ರೂ.ಗಳ ಉದ್ದೇಶಿತ ಬಂಡವಾಳ ಹೂಡಿಕೆಗೆ ಅನುಮೋದನೆ ನೀಡಿದ್ದು ಈ 13 ಬೃಹತ್ ಯೋಜನೆಗಳಿಂದ ಸುಮಾರು 11,137 ಉದ್ಯೋಗಾವಕಾಶ ರಾಜ್ಯದಲ್ಲಿ ಸೃಷ್ಟಿಯಾಗಲಿದೆ.

ಕರ್ನಾಟಕ ರಾಜ್ಯವು ವಿದೇಶಿ ನೇರ ಬಂಡವಾಳ ಆಕರ್ಷಿಸುವುದರಲ್ಲಿ ಹೆಚ್ಚಿನ ಪಾಲು ಹೊಂದಿದ್ದು ಪ್ರಸಕ್ತ ವರ್ಷ 2021–22 (ನವೆಂಬರ್ 2021 ಅಂತ್ಯದವರೆಗೆ)

US$ 8,448 ಮಿಲಿಯನ್ ವಿದೇಶಿ ನೇರ ಬಂಡವಾಳ ಹೂಡಿಕೆಯನ್ನು ಆಕರ್ಷಿಸಲಾಗಿದೆ.

ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ಯಮಗಳು ರಾಜ್ಯದ ಕೈಗಾರಿಕಾ ಅಭಿವೃದ್ಧಿಗೆ ಪ್ರಮುಖ ಕೊಡುಗೆ ನೀಡಿದೆ. ಪ್ರಸಕ್ತ ಹಣಕಾಸು ವರ್ಷ 2021–22 ರಲ್ಲಿ (ನವೆಂಬರ್ 2021ರ ಅಂತ್ಯದವರೆಗೆ) 80,735 ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಗಾತ್ರದ ನೂತನ ಕೈಗಾರಿಕೆಗಳು ರಾಜ್ಯದಲ್ಲಿ ನೋಂದಾಯಿಸಿಕೊಂಡಿದ್ದು ಈ ಕೈಗಾರಿಕಾ ಘಟಕಗಳಿಂದ ಸುಮಾರು 2,934.84 ಕೋಟಿ ರೂ.ಗಳ ಬಂಡವಾಳ ಹೂಡಿಕೆಯಾಗುವ ಸಾಧ್ಯತೆಯಿದ್ದು 6,51,934 ಉದ್ಯೋಗಾವಕಾಶ ಸೃಷ್ಟಿಯಾಗಲಿದೆ.

**ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಗೆ ರಾಜ್ಯ ಸರ್ಕಾರದ ಬೆಂಬಲ :**

ಪ್ರಸ್ತುತ ಹಣಕಾಸು ವರ್ಷದಲ್ಲಿ ಕರ್ನಾಟಕ ಸರ್ಕಾರವು ಸಂಸ್ಥೆಗೆ 50.00 ಕೋಟಿ ರೂ.ಗಳ ಈಕ್ವಿಟಿ ಬಂಡವಾಳವನ್ನು ಹಾಗೂ 171.85 ಕೋಟಿ ರೂ.ಗಳ ಬಡ್ಡಿ ಸಹಾಯಧನದ ನೆರವನ್ನು ಹಲವು ಯೋಜನೆಗಳಡಿಯಲ್ಲಿ ಒದಗಿಸಿದ್ದು, ಅವುಗಳ ವಿವರ ಈ ಕೆಳಗಿನಂತಿವೆ :

| | |
|---|---|
| ಪರಿಶಿಷ್ಟ ಜಾತಿ ಉದ್ದಿಮೆದಾರರಿಗೆ | 44.35 ಕೋಟಿ ರೂ.ಗಳು |
| ಪರಿಶಿಷ್ಟ ಪಂಗಡಗಳ ಉದ್ದಿಮೆದಾರರಿಗೆ | 22.00 ಕೋಟಿ ರೂ.ಗಳು |
| ಮಹಿಳಾ ಉದ್ದಿಮೆದಾರರಿಗೆ | 58.00 ಕೋಟಿ ರೂ.ಗಳು |
| ಇತರೆ ಉದ್ದಿಮೆದಾರ ಬಡ್ಡಿ ಸಹಾಯಧನ ಯೋಜನೆ ಮತ್ತು ಮೊದಲ ಪೀಳಿಗೆ ಉದ್ದಿಮೆದಾರರ ಯೋಜನೆಗೆ ಒಟ್ಟು | 47.50 ಕೋಟಿ ರೂ.ಗಳು |
| **ಒಟ್ಟು** | **171.85 ಕೋಟಿ ರೂ.ಗಳು** |

**ಸಹಾಯಧನ ಮತ್ತು ಅನುದಾನಗಳು:**

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಉದ್ಯಮಿಗಳು ಸ್ಥಾಪಿಸುವ ಜವಳಿ ಮತ್ತು ಕೈಮಗ್ಗ ಘಟಕಗಳಿಗೆ ವಿಶೇಷ ಅನುದಾನ ಯೋಜನೆಯಡಿಯಲ್ಲಿ ಕರ್ನಾಟಕ ಸರ್ಕಾರವು 25.15 ಕೋಟಿ ರೂ.ಗಳ ಅನುದಾನವನ್ನು ಬಿಡುಗಡೆ ಮಾಡಿದೆ.

**ಹಣಕಾಸು ವರ್ಷ – 2021–22ನೇ ಸಾಲಿನಲ್ಲಿನ ಪ್ರಮುಖ ನೀತಿ–ನಿರ್ಧಾರಗಳು :**

1. ಭಾರತೀಯ ರಿಸರ್ವ್ ಬ್ಯಾಂಕ್ ಅಧಿಸೂಚನೆ ರೆಸಲ್ಯೂಷನ್ ಫ್ರೇಮ್ ವರ್ಕ್ 2.0 ಗೆ ಅನುಗುಣವಾಗಿ ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಗಾತ್ರದ ಘಟಕಗಳಿಗೆ ಕೋವಿಡ್–19ರ ಸಾಂಕ್ರಾಮಿಕ ರೋಗದ ಪರಿಣಾಮದ ಸಮಸ್ಯೆಗಳಿಗೆ ಸಾಲ ಮರುಪಾವತಿಯ ಪುನಾರಚನೆ ಸೌಲಭ್ಯ ನೀಡಲಾಯಿತು.
2. ಆದಾಯ ಗುರುತಿಸುವಿಕೆ, ಸ್ವತ್ತುಗಳ ವರ್ಗೀಕರಣ ಮತ್ತು ಮುಂಗಡಗಳಿಗೆ ಸಂಬಂಧಿಸಿದ ನಿಬಂಧನೆಗಳ ಮೇಲಿನ ವಿವೇಚನಾಶೀಲ, ಪರಿಷ್ಕೃತ ಮಾನದಂಡಗಳನ್ನು ಅನುಷ್ಠಾನಗೊಳಿಸಲಾಗಿದೆ [IRACP ಮಾನದಂಡಗಳು]
3. SEBI [LODR] ನಿಯಮಗಳು 2015ರ 5ನೇ ತಿದ್ದುಪಡಿಯ ಅನ್ವಯ ತ್ರೈಮಾಸಿಕ ಫಲಿತಾಂಶಗಳ ಪ್ರಕಟಣೆ ಸೇರಿದಂತೆ ಅನುಸರಣೆ ಕಾರ್ಯವಿಧಾನಗಳನ್ನು ಅಳವಡಿಸಲಾಗಿದೆ.
4. ಮಹಿಳಾ ಉದ್ಯಮಿಗಳು ಸ್ಥಾಪಿಸುವ ಸೇವಾ ವಲಯಗಳ ಘಟಕಗಳಿಗೆ ವಾರ್ಷಿಕ ಶೇ.4ರ ಬಡ್ಡಿದರ ಸಹಾಯಧನ ಯೋಜನೆಯನ್ನು ಮರು ಅನುಷ್ಠಾನಗೊಳಿಸಲಾಯಿತು.
5. ಸಂದೇಹಾಸ್ಪದ–2 / ನಷ್ಟದ ಸ್ವತುಗಳನ್ನು ಫ್ರುಡೆನ್ಷಿಯಲ್ ರೈಟ್–ಆಫ್ (Prudential Write-off) ಕ್ರಮ ಕೈಗೊಳ್ಳಲಾಯಿತು.

**ಕಾರ್ಯಾಚರಣೆಯ ಮುಖ್ಯಾಂಶಗಳು :**
**ಮಂಜೂರಾತಿಗಳು:**

2021–22ರ ಆರ್ಥಿಕ ವರ್ಷದಲ್ಲಿ ವಿವಿಧ ಸಾಲ ಯೋಜನೆಗಳ ಮೂಲಕ 461 ಉದ್ಯಮಗಳಿಗೆ (ಪ್ರಕರಣಗಳಿಗೆ) 493.25 ಕೋಟಿ ರೂ.ಗಳನ್ನು ಮಂಜೂರಾತಿ

ಮಾಡಲಾಗಿದೆ. 2022ರ ಮಾರ್ಚ್ ಅಂತ್ಯದವರೆಗೆ 1,75,123 ಉದ್ಯಮಗಳಿಗೆ 18,779.63 ಕೋಟಿ ರೂ.ಗಳ ಸಂಚಿತ ಸಾಲ ಮಂಜೂರಾತಿ ಮಾಡಲಾಗಿದೆ.

**ವಿತರಣೆ:**

2021–22ನೇ ಸಾಲಿನಲ್ಲಿ ಸಂಸ್ಥೆ 386.46 ಕೋಟಿ ರೂ.ಗಳನ್ನು ವಿತರಣೆ ಮಾಡಿದೆ. ಕಳೆದ ವರ್ಷ 432.96 ಕೋಟಿ ರೂ.ಗಳನ್ನು ವಿತರಣೆ ಮಾಡಿತ್ತು. 31.03.22ರವರೆಗಿನ ಸಂಚಿತ ವಿತರಣೆ 14,776.29 ಕೋಟಿ ರೂ.ಗಳಷ್ಟು ತಲುಪಿದೆ.

**ಬಂಡವಾಳ, ಉತ್ಪನ್ನಗಳ ಮೌಲ್ಯ ಮತ್ತು ಉದ್ಯೋಗ:**

2021–22ನೇ ಸಾಲಿನಲ್ಲಿ ಸಂಸ್ಥೆಯಿಂದ ನೀಡಲಾದ ಸಾಲಗಳನ್ನೊಳಗೊಂಡು 2,601.82ಕೋಟಿ ರೂ.ಗಳಷ್ಟು ಬಂಡವಾಳ ಹೂಡಿಕೆ ಮಾಡಬಹುದೆಂದು ಅಂದಾಜು ಮಾಡಲಾಗಿದ್ದು ಉತ್ಪಾದನೆಯ ಮೌಲ್ಯ 1,633.93 ಕೋಟಿ. ರೂ.ಗಳಾಗಿದ್ದು, 5,442 ಜನರಿಗೆ ಉದ್ಯೋಗ ಸೃಷ್ಟಿಸುವುದೆಂದು ಅಂದಾಜು ಮಾಡಲಾಗಿದೆ.

**ವಸೂಲಾತಿ:**

ಪ್ರಸ್ತುತ 2021–22ರ ವರ್ಷದಲ್ಲಿ ಸಂಸ್ಥೆ ಒಟ್ಟು 741.89 ಕೋಟಿ.ರೂ ಗಳನ್ನು ವಸೂಲಾತಿ ಮಾಡಿತು. ಕಳೆದ ವರ್ಷ ಸಂಸ್ಥೆಯು 638.68 ಕೋಟಿ ರೂ.ಗಳನ್ನು ವಸೂಲಿ ಮಾಡಿತ್ತು. ಪ್ರಸ್ತುತ ವರ್ಷದಲ್ಲಿ ವಸೂಲಾಗದ ಸಾಲಗಳಿಂದ [D-III (Pre MOU), D-III/D-II (Prudential), MR] 55.84 ಕೋಟಿ ರೂ.ಗಳನ್ನು ವಸೂಲಾತಿ ಮಾಡಲಾಗಿದೆ.

**ಹಣಕಾಸು ಫಲಿತಾಂಶಗಳು:**

ಪ್ರಸ್ತುತ ವರ್ಷದಲ್ಲಿ ಸಂಸ್ಥೆಯು 359.02 ಕೋಟಿ ರೂ.ಗಳ ಒಟ್ಟಾರೆ ಆದಾಯವನ್ನು ಗಳಿಸಿದ್ದು, ಕಳೆದ ಹಣಕಾಸು ವರ್ಷ ಈ ಆದಾಯವು 360.90 ಕೋಟಿ ರೂ.ಗಳಾಗಿತ್ತು. ಸಂಸ್ಥೆಯು ಆರ್ಥಿಕ ಸ್ಥಿತಿಯನ್ನು ಕ್ರೋಢೀಕರಿಸಿ ತೆರಿಗೆ ಪೂರ್ವ ರೂ. 107.33 ಕೋಟಿಗಳ ದಾಖಲೆ ಲಾಭವನ್ನು ಗಳಿಸಿದೆ ಹಾಗೂ ರೂ.66.61 ಕೋಟಿಗಳ ನಿವ್ವಳ ಲಾಭವನ್ನು ಗಳಿಸಿದೆ.

**ಲಾಭಾಂಶ :**

2021–22ರ ಹಣಕಾಸು ವರ್ಷದಲ್ಲಿಯೂ ಮುಂದುವರೆದ ನಷ್ಟವಿದ್ದುದರಿಂದ (carry forward losses) ಸಂಸ್ಥೆಯ ವತಿಯಿಂದ ಯಾವುದೇ ರೀತಿಯ ಲಾಭಾಂಶವನ್ನು ಶಿಫಾರಸ್ಸು ಮಾಡಿರುವುದಿಲ್ಲ.

**ಖಜಾನೆ ಚಟುವಟಿಕೆ:**

ಪ್ರಸಕ್ತ ವರ್ಷದಲ್ಲಿ ಕರ್ನಾಟಕ ರಾಜ್ಯ ಸರ್ಕಾರವು ರೂ.50.00 ಕೋಟಿಗಳ ಈಕ್ವಿಟಿ ಷೇರು ಬಂಡವಾಳ ನೀಡಿರುತ್ತದೆ. ದಿನಾಂಕ 31.03.2022ರ ಅಂತ್ಯಕ್ಕೆ ರೂ.895.39 ಕೋಟಿಗಳ ಈಕ್ವಿಟಿ ಷೇರು ಬಂಡವಾಳವಿರುತ್ತದೆ ಹಾಗೂ ಕಳೆದ ವರ್ಷದ ಅಂತ್ಯಕ್ಕೆ ರೂ.795.39 ಕೋಟಿಗಳು ಇರುತ್ತದೆ. ಪ್ರಸ್ತುತ ವರ್ಷದಲ್ಲಿ ರೂ.100.00 ಕೋಟಿಗಳ ಷೇರು ಅರ್ಜಿ ಮೊತ್ತವನ್ನು ಷೇರು ಬಂಡವಾಳವಾಗಿ ಪರಿವರ್ತಿಸಲಾಗಿದೆ. ದಿನಾಂಕ 31.03.2022ರ ಅಂತ್ಯಕ್ಕೆ ರೂ.50.00 ಕೋಟಿಗಳ ಷೇರು ಅರ್ಜಿ ಮೊತ್ತವಿರುತ್ತದೆ.

ಪ್ರಸಕ್ತ ವರ್ಷದಲ್ಲಿ ಸಂಸ್ಥೆಯು ರೂ.150.00 ಕೋಟಿಗಳ ಬಾಂಡುಗಳನ್ನು ಪಾವತಿಸಿದೆ. ಬಾಕಿ ಉಳಿದ ಬಾಂಡುಗಳು ರೂ.700.00 ಕೋಟಿಗಳಿಗೆ ಇಳಿಕೆಯಾಗಿದ್ದು ಈ ಮೊತ್ತ 31.03.2021ರ ಅಂತ್ಯಕ್ಕೆ ರೂ.850.00 ಕೋಟಿಗಳಷ್ಟಿತ್ತು.

ಪ್ರಸಕ್ತ ವರ್ಷದಲ್ಲಿ ಸಂಸ್ಥೆಯು ಭಾರತೀಯ ಸ್ಟೇಟ್ ಬ್ಯಾಂಕಿನಿಂದ ರೂ.100.00 ಕೋಟಿಗಳ ಅವಧಿ ಸಾಲವನ್ನು ಪಡೆಯಲಾಗಿದ್ದು ಹಾಗೂ ರೂ.96.23 ಕೋಟಿಗಳ ಮತ್ತು ರೂ.129.50 ಕೋಟಿಗಳ ಅವಧಿ ಸಾಲವನ್ನು ಭಾರತೀಯ ಸ್ಟೇಟ್ ಬ್ಯಾಂಕ್ ಹಾಗೂ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾಗಳಿಗೆ ಅನುಕ್ರಮವಾಗಿ ಮರುಪಾವತಿಸಿದೆ.

ಹಣಕಾಸು ವರ್ಷ 2020–21ರಲ್ಲಿನ ಬಾಂಡ್‌ಗಳ ಮೇಲಿನ ಬಡ್ಡಿಯು ರೂ.85.80 ಕೋಟಿಗಳಿಂದ, ಪ್ರಸ್ತುತ 2021–22ರ ಹಣಕಾಸು ವರ್ಷದಲ್ಲಿ ರೂ.75.45 ಕೋಟಿಗಳಿಗೆ ಇಳಿಕೆಯಾಗಿದೆ. ಬಾಂಡ್ ಹೊಣೆಗಾರಿಕೆ ಕಡಿಮೆಯಾದ ಕಾರಣ ಬಡ್ಡಿ ಮೊತ್ತ ಇಳಿಕೆಯಾಗಿದೆ. ಮುಂದುವರಿದು, ಸಂಸ್ಥೆಯು ರೂ.19.86 ಕೋಟಿಗಳ ಹಾಗೂ ರೂ.9.70 ಕೋಟಿಗಳ ಅವಧಿ ಸಾಲದ ಮೇಲಿನ ಬಡ್ಡಿಯ ಪಾವತಿಯನ್ನು ಭಾರತೀಯ ಸ್ಟೇಟ್ ಬ್ಯಾಂಕ್ ಹಾಗೂ ಯೂನಿಯನ್ ಬ್ಯಾಂಕ್ ಆಫ್

ಇಂಡಿಯಾಗಳಿಗೆ ಅನುಕ್ರಮವಾಗಿ ಪಾವತಿಸಿದೆ. ಪ್ರಸ್ತುತ ಹಣಕಾಸು ವರ್ಷದಲ್ಲಿ ಸಂಸ್ಥೆಯು ಕರ್ನಾಟಕ ಸರ್ಕಾರಕ್ಕೆ ಖಾತರಿ ಕಮೀಷನ್ನಿನ ರೂಪದಲ್ಲಿ ರೂ.12.95 ಕೋಟಿಗಳನ್ನು (ಜಿ.ಎಸ್.ಟಿ.ಯ ನಿವ್ವಳದಲ್ಲಿ) ಕ್ಯಾಷ್ ಬೇಸಿಸ್‌ನಂತೆ ಪಾವತಿಸಿದ್ದು, ಹಣಕಾಸು ವರ್ಷ 2020–21ರ ಸಾಲಿನಲ್ಲಿ ಈ ಮೊತ್ತವು ರೂ.15.81 ಕೋಟಿಗಳಷ್ಟಿತ್ತು (ಜಿ.ಎಸ್.ಟಿ.ಯ ನಿವ್ವಳದಲ್ಲಿ).

ಸಂಸ್ಥೆಯ ಒಟ್ಟು ದೀರ್ಘಾವಧಿ ಸಾಲವು 31.03.2021ರ ವರ್ಷಾಂತ್ಯಕ್ಕೆ ರೂ.1301.34 ಕೋಟಿಗಳಿಂದ, 31.03.2022ರ ಅಂತ್ಯಕ್ಕೆ ರೂ.1025.60 ಕೋಟಿಗಳಿಗೆ ಇಳಿಕೆ ಕಂಡಿದೆ. 2020–21ನೇ ಸಾಲಿನ ಒಟ್ಟು ಬಡ್ಡಿ ಮತ್ತು ಆರ್ಥಿಕ ವೆಚ್ಚಗಳು ರೂ.143.02 ಕೋಟಿಗಳಿದ್ದು, ಈ ವೆಚ್ಚಗಳು ಪ್ರಸಕ್ತ ಹಣಕಾಸು ವರ್ಷ 2021–22 ರಲ್ಲಿ ರೂ.118.54 ಕೋಟಿಗಳಿಗೆ ಇಳಿಕೆ ಕಂಡಿದೆ.

**ವ್ಯವಹಾರ ಅಭಿವೃದ್ಧಿ ಮತ್ತು ಸಾಲಗಳ ಸಂಶೋಧನೆ :**

ವ್ಯವಹಾರ ಅಭಿವೃದ್ಧಿ ಮತ್ತು ಸಾಲಗಳ ಸಂಶೋಧನೆ ವಿಭಾಗದ ಪ್ರಮುಖ ಕಾರ್ಯವು ಉದ್ಯಮಿಗಳಿಗೆ ಸಂಸ್ಥೆಯ ವಿಶೇಷ ಆಕರ್ಷಕ ಯೋಜನೆಗಳ ಬಗ್ಗೆ ಅರಿವು ಮೂಡಿಸುವುದು, ಸಂಸ್ಥೆಯ ಸಾಲ ಯೋಜನೆಗೆ ಪೂರಕವಾಗಿ ಮಾರುಕಟ್ಟೆಯ ವ್ಯಾಪ್ತಿ ಬೇಡಿಕೆಯ ಅಧ್ಯಯನ, ಮಾರುಕಟ್ಟೆ ವಿಶ್ಲೇಷಣೆ ಆಧಾರದ ಮೇಲೆ ಮಾರುಕಟ್ಟೆ ವರದಿಯನ್ನು ಸಿದ್ಧಪಡಿಸುವುದು.

ಪ್ರಸ್ತುತ ಸಂಸ್ಥೆಯಲ್ಲಿ ಮಹಿಳಾ ಉದ್ಯಮಿಗಳಿಗೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಉದ್ಯಮಿಗಳಿಗೆ ಹಾಗೂ ಅತಿ ಸಣ್ಣ ಮತ್ತು ಸಣ್ಣ ಉದ್ಯಮಿಗಳಿಗೆ ಲಭ್ಯವಿರುವ ಬಡ್ಡಿ ಸಹಾಯಧನ ಯೋಜನೆಗಳ ಬಗ್ಗೆ ಉದ್ಯಮಿಗಳಿಗೆ ಮಾರ್ಗದರ್ಶನ ನೀಡುವುದು.

**ಹಣಕಾಸು ಸೇವೆಗಳ ಚಟುವಟಿಕೆಗಳು :**

ಸಾಮಾನ್ಯ ವಿಮಾ ಉತ್ಪನ್ನಗಳ ಮಾರಾಟಕ್ಕಾಗಿ ಯುನೈಟೆಡ್ ಇಂಡಿಯಾ ಇನ್ಸೂರೆನ್ಸ್ ಕಂಪನಿ ಹಾಗೂ ಇಫ್ಕೋ ಟೋಕಿಯೋ ಜನರಲ್ ಇನ್ಸೂರೆನ್ಸ್ ಕಂಪನಿಗಳೊಡನೆ ಸಂಸ್ಥೆಯು ಒಡಂಬಡಿಕೆ ಮಾಡಿಕೊಂಡಿದ್ದು, ಕಾರ್ಪೊರೇಟ್ ಏಜೆಂಟ್ ಆಗಿ ಕಾರ್ಯನಿರ್ವಹಿಸುತ್ತದೆ.

ಪ್ರಸಕ್ತ 2021–22 ಹಣಕಾಸು ವರ್ಷದಲ್ಲಿ ಸಂಸ್ಥೆಯು 377.15 ಲಕ್ಷ ರೂ.ಗಳಷ್ಟು ವಿಮಾ ಕಂತುಗಳ ವ್ಯವಹಾರ ನೀಡಿ, 49.57 ಲಕ್ಷ ರೂ.ಗಳ ಕಮೀಷನ್ ಗಳಿಸಿದೆ (ಎರಡು ಕಂಪನಿಗಳಿಂದ).

**2022–23ನೇ ಸಾಲಿನ ಮುನ್ನೋಟ:**

ಹಣಕಾಸು ವರ್ಷ 2019–20ರಲ್ಲಿ ಕೋವಿಡ್–19 ಸಾಂಕ್ರಾಮಿಕ ರೋಗವು ಆಘಾತಕಾರಿ ರೀತಿಯಲ್ಲಿ ದೇಶದ ಆರ್ಥಿಕ ಮತ್ತು ಆರೋಗ್ಯ ಬಿಕ್ಕಟ್ಟನ್ನು ಸೃಷ್ಟಿಸಿರುತ್ತದೆ ಮತ್ತು 2021–22ರಲ್ಲಿ ಕರೋನ ಸಾಂಕ್ರಾಮಿಕ ರೋಗವನ್ನು ನಿಗ್ರಹಿಸಲು ಅಗತ್ಯವಾದ ಕ್ರಮಗಳಿಂದ ಆರ್ಥಿಕ ಚಟುವಟಿಕೆಗಳಲ್ಲಿ ಸಕಾರಾತ್ಮಕ ಅಭಿವೃದ್ಧಿಯನ್ನು ನೋಡಬಹುದಾಗಿದೆ. ಕೋವಿಡ್–19 ಸಾಂಕ್ರಾಮಿಕ ಬಿಕ್ಕಟ್ಟಿನ ನಂತರದ ಚೇತರಿಕೆ ಅಂತರ್ಗತ ಮತ್ತು ಆರ್ಥಿಕ ಅಭಿವೃದ್ಧಿಯನ್ನು ಸುಸ್ಥಿರವಾಗಿಸಲು, ಹಣಕಾಸು ಸೇರ್ಪಡೆ ನೀತಿಯು ಆದ್ಯತೆಯಾಗಿ ಮುಂದುವರಿಯುತ್ತದೆ. 2021–22ರಲ್ಲಿ ರಾಜ್ಯ ಸರ್ಕಾರದ ಬೆಂಬಲದೊಂದಿಗೆ ಎಲ್ಲಾ ವರ್ಗದ ಉದ್ಯಮಿಗಳಿಗಾಗಿ ರೂಪಿತವಾದ ನವೀಕೃತ ಬಡ್ಡಿ ಸಹಾಯಧನ ಯೋಜನೆ ಹಾಗೂ ಮಹಿಳಾ ಉದ್ಯಮಿಗಳು ಸ್ಥಾಪಿಸುವ ಸೇವಾ ವಲಯಗಳ ಘಟಕಗಳಿಗೆ ಬಡ್ಡಿ ಸಹಾಯಧನ ಯೋಜನೆಯ ಮರು ಅನುಷ್ಠಾನದಿಂದ ಮುಂಬರುವ ಆರ್ಥಿಕ ವರ್ಷದಲ್ಲಿ ಹೆಚ್ಚಿನ ಮಂಜೂರಾತಿ ಹಾಗೂ ವಿತರಣೆಯ ಗುರಿ ಸಾಧಿಸಲು ಅನುಕೂಲವಾಗುವ ನಿರೀಕ್ಷೆಯಿದೆ.

**ಹಣಕಾಸು ವರ್ಷ 2022–23ಕ್ಕೆ ಗುರಿ:**

ಹಣಕಾಸು ವರ್ಷ 2022–23ರಲ್ಲಿ ಈ ಕೆಳಗಿನ ಕಾರ್ಯಚರಣೆಯ ಗುರಿಯನ್ನು ಸಂಸ್ಥೆಯು ಇರಿಸಿಕೊಂಡಿದೆ.

| | | |
|---|---|---|
| **ಮಂಜೂರಾತಿ** | : | **ರೂ. 1010.00 ಕೋಟಿಗಳು** |
| **ವಿತರಣೆ** | : | **ರೂ. 710.00 ಕೋಟಿಗಳು** |
| **ವಸೂಲಾತಿ** | : | **ರೂ. 740.00 ಕೋಟಿಗಳು*** |
| | | **(*305 ಕೋಟಿ ರೂ.ಗಳ ಬಡ್ಡಿ ವಸೂಲಾತಿ ಒಳಗೊಂಡಂತೆ)** |

ಸಂಸ್ಥೆಯ ಕೆಲಸ ಕಾರ್ಯಗಳಿಂದ ಉತ್ತಮ ಪರಿಣಾಮ ಹೊರಹೊಮ್ಮುವ ರೀತಿಯಲ್ಲಿ ಸಂಯೋಜಿತ ಪ್ರಯತ್ನಗಳನ್ನು ಮಾಡಲಾಗುವುದು.

**ಕೃತಜ್ಞತೆಗಳು:**

ಕರ್ನಾಟಕ ಸರ್ಕಾರವು ಸಂಸ್ಥೆಗೆ ಈಕ್ವಿಟಿ ನೆರವಿನ ಬೆಂಬಲ, ಬಡ್ಡಿ ಸಹಾಯಧನ ಬೆಂಬಲ ಹಾಗೂ ಸಣ್ಣ ಪ್ರಮಾಣದ ಸಾಲದ ಖಾತೆಗಳನ್ನು ಮುಕ್ತಾಯಗೊಳಿಸಲು ಸಹಕಾರ ನೀಡಿದ್ದಕ್ಕಾಗಿ ನನ್ನ ವಿಶೇಷ ಕೃತಜ್ಞತೆಗಳನ್ನು ಕರ್ನಾಟಕ ಸರ್ಕಾರಕ್ಕೆ ಸಲ್ಲಿಸುತ್ತೇನೆ.

ಸಂಸ್ಥೆಯ ಕಾರ್ಯಾಚರಣೆಯ ಪ್ರತಿಯೊಂದು ಹಂತದಲ್ಲೂ ಸಹಾಯ ಮತ್ತು ಮಾರ್ಗದರ್ಶನ ನೀಡಿದ್ದಕ್ಕಾಗಿ ಭಾರತೀಯ ಸಣ್ಣ ಕೈಗಾರಿಕಾ ಅಭಿವೃದ್ಧಿ ಬ್ಯಾಂಕ್, ಭಾರತೀಯ ರಿಸರ್ವ್ ಬ್ಯಾಂಕ್, ಭಾರತ ಸರ್ಕಾರ, ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ಈ–ಗವರ್ನೆನ್ಸ್ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಮಾಹಿತಿ ತಂತ್ರಜ್ಞಾನ ಇಲಾಖೆ, ಇವರುಗಳ ನಿರಂತರ ಬೆಂಬಲ ಹಾಗೂ ಮಾರ್ಗದರ್ಶನಕ್ಕಾಗಿ ನನ್ನ ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

ಭಾರತೀಯ ಜೀವ ವಿಮಾ ನಿಗಮ, ಸ್ಟಾಕ್ ಹೋಲ್ಡಿಂಗ್ ಕಾರ್ಪೋರೇಷನ್ ಆಫ್ ಇಂಡಿಯಾ ಲಿಮಿಟೆಡ್, ಯುನೈಟೆಡ್ ಇಂಡಿಯಾ ಇನ್ಸೂರೆನ್ಸ್ ಕಂಪನಿ, ಹೆಚ್.ಡಿ.ಎಫ್.ಸಿ ಬ್ಯಾಂಕ್, ಎಸ್.ಬಿ.ಐ. ಜೀವವಿಮಾ ಕಂ.ಲಿ. ಇಫ್ಕೋ ಟೋಕಿಯೋ ಇನ್ಸೂರೆನ್ಸ್ ಕಂಪನಿ ಮತ್ತು ಕೈಗಾರಿಕಾ ಸಂಘ ಸಂಸ್ಥೆಗಳಾದ ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘ, ಅವೇಕ್, ಈ–ಮರ್ಜ್, ಉಬಂಟು ಮಹಿಳಾ ಉದ್ಯಮಿಗಳ ಒಕ್ಕೂಟ, ಕಾನ್‌ಫೆಡರೇಷನ್ ಆಫ್ ಇಂಡಿಯನ್ ಇಂಡಸ್ಟ್ರಿ, ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ ಮುಂತಾದವುಗಳಿಗೂ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ವಾಣಿಜ್ಯ ಬ್ಯಾಂಕುಗಳು, ಆಪೆಕ್ಸ್ ಬ್ಯಾಂಕ್, ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆ ಆಭಿವೃದ್ಧಿ ನಿಗಮ, ಕರ್ನಾಟಕ ಕೈಗಾರಿಕಾ ವಲಯ ಅಭಿವೃದ್ಧಿ ನಿಗಮ, ಮತ್ತು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ವಿಶ್ವೇಶ್ವರಯ್ಯ ವಾಣಿಜ್ಯ ಆಭಿವೃದ್ಧಿ ನಿಗಮ, ರಾಷ್ಟ್ರೀಯ ಸಣ್ಣ ಕೈಗಾರಿಕೆಗಳ ಆಭಿವೃದ್ಧಿ ಸಂಸ್ಥೆ (NSIC), MSME-DI ಅಭಿವೃದ್ಧಿ ಸಂಸ್ಥೆ, ಕರ್ನಾಟಕ ಉದ್ಯೋಗ ಮಿತ್ರ ಅವರುಗಳ ಸಹಕಾರಕ್ಕಾಗಿ ನನ್ನ ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

ನಿರ್ದೇಶಕರುಳಾಗಿದ್ದು ತಮ್ಮ ಸ್ಥಾನಗಳಿಂದ ನಿರ್ಗಮಿಸುತ್ತಿರುವ ಶ್ರೀ ರಮೇಶ್ ಧರ್ಮಾಜಿ, ಶ್ರೀ ವಿ.ಎಂ. ಗಿರಿಧರ್ ಮತ್ತು ಶ್ರೀ ಕೆ.ಎನ್. ರಾಜಣ್ಣ ಅವರುಗಳು ತಮ್ಮ ಸೇವಾವಧಿಯಲ್ಲಿ ಸಲ್ಲಿಸಿದ ಸೇವೆಗಾಗಿ ನನ್ನ ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

ಸಂಸ್ಥೆಯಿಂದ ನೆರವು ಪಡೆದಿರುವ ಎಲ್ಲಾ ಉದ್ದಿಮೆದಾರರು, ಸಂಸ್ಥೆಯ ಷೇರುದಾರರು ನೀಡಿದ ನಿರಂತರ ಸಹಾಯ ಹಾಗೂ ಸಂಸ್ಥೆಯ ಬಾಂಡ್‌ಗಳಲ್ಲಿ ಹಣ ತೊಡಗಿಸಿರುವ ಹೂಡಿಕೆದಾರರಿಗೂ ನನ್ನ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಭಾರತೀಯ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಹಾಗೂ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಇವರುಗಳು ಸಂಸ್ಥೆಗೆ ಸಕಾಲಕ್ಕೆ ಅವಧಿ ಸಾಲದ ನೆರವು ನೀಡಿರುವುದಕ್ಕೆ ನನ್ನ ವಿಶೇಷ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಕೊನೆಯದಾಗಿ, ಸಂಸ್ಥೆಯ ಎಲ್ಲಾ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರ ಪರಿಶ್ರಮಕ್ಕಾಗಿ ನಾನು ಹೃತ್ಪೂರ್ವಕ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತೇನೆ.

ಸ್ಥಳ : ಬೆಂಗಳೂರು **ಅಧ್ಯಕ್ಷರು**
ದಿನಾಂಕ : 15ನೇ ಜುಲೈ 2022

**Sri I S N Prasad, IAS**
**Chairman**
**Statement made at the**
**63rd Annual General Meeting**
**held on 15th, July 2022**

**Dear Shareholders,**

It is my pleasure to welcome you all to the 63rd Annual General Meeting of our Corporation. I am delighted to present the 63rd Annual Report on the operations of the Corporation, together with, the audited statements of the accounts for the year ended 31st March, 2022.

During the Financial Year 2021-22, the Corporation consolidated its financial position and record profits by registering a profit before tax of Rs.107.32 crore and net profit of Rs.66.61 crore. The performance of the Corporation is remarkable in the pace of severe economic distress caused on account of COVID-19 pandemic.

The Directors' report and the audited financial statements of accounts for the 63rd year ended 31st March, 2022 have already been placed with you. I presume you had an opportunity to go through the report and hence I take it as read. However, I would like to take this opportunity to share with you some of the salient aspects of the report.

**GLOBAL ECONOMY :**

After rebounding to an estimated 5.5 percent in 2021, global growth is expected to decelerate markedly to 4.1 percent in 2022, reflecting continued COVID-19 flare-ups, diminished fiscal support and lingering supply bottlenecks. The near-term outlook for global growth is

somewhat weaker and for global inflation notably higher, than previously envisioned, owing to pandemic resurgence, higher food and energy prices and more pernicious supply disruptions.

Global growth is estimated to have surged to 5.5 percent in 2021 - its strongest post-recession pace in 80 years, as a relaxation of pandemic-related lockdowns in many countries helped boost demand. Notwithstanding this annual increase, resurgences of the COVID-19 pandemic and widespread supply bottlenecks weighed appreciably on global activity in the second half of last year.

**INDIAN ECONOMY :**

The Indian economy, as seen in quarterly estimates of GDP, has been staging a sustained recovery since the second half of 2020-21. Although the second wave of the pandemic in April- June 2021 was more severe from the health perspective, the economic impact was muted compared to the national lockdown of the previous year. Advance estimates suggest that GDP will record an expansion of 9.2 per cent in 2021-22. This implies that the level of real economic output will surpass the pre-COVID level of 2019-20.

The agricultural sector was the least impacted by the pandemic-related disruptions. It is estimated to grow 3.9 per cent in 2021-22 on top of 3.6 per cent in the previous year. The industrial sector went through a big swing by first contracting by 7 per cent in 2020-21 and then expanding by 11.8 per cent in 2021-22. The manufacturing, construction and mining sub-sectors went through the same swing. The share of industry in GVA is now estimated at 28.2 per cent.

Service sector account for more than half of the Indian economy and was the most impacted by the COVID-19 related restrictions, especially for activities that need human contact. Although the overall sector first contracted by 8.4 per cent in 2020-21 and then is estimated to grow by 8.2 per cent in 2021-22, it should be noted that there is a wide dispersion of performance by different sub-sectors.

**KARNATAKA ECONOMY :**

The State has reinforced its thrust to support innovation, strengthen information technology and continued its commitment towards social welfare and gender equality.

Advanced estimates of Karnataka's GSDP in nominal terms for FY 2021-22 is Rs. 20.50 lakh crore, up from Rs. 17.31 lakh crore in FY 2021-22. It is contributing 8.8% to the national GDP of Rs. 232.15 lakh crore in FY 2021-22. The state grew by 7.2% in nominal terms during the pandemic struck FY 2021-22, compared to -3% recession of the national economy.

The contribution of agricultural sector to the overall GSDP saw a marginal decrease from 14.30% to 14.10% in 2021-22 against 2020-21. Industry sector saw a marginal increase from 19.40% to 19.80% in 2021-22 against 2020-21. The service sector a largest component of GSDP saw a marginal decrease from 66.30% in 2020-21 to 66.10% in 2021-22. The contribution of 'Real estate, Professional Services & Ownership of Dwellings' is highest with (33.21%) in 2021-22 followed by 'Manufacturing (12.52%)', 'Trade and Repair Services (11.55%)' and 'Crops (9.56%)'.

Per Capita State Income (i.e. per capita NSDP) of Karnataka at current prices is estimated to be Rs.2,78,786 showing a rise of 17.9% during 2021-22, as against Rs.2,36,451 in 2020-21. Karnataka's per capita income is higher than All India per capita income.

Total export performance during 2021-22 [upto September 2021] is Rs.4,30,343.00 crore. The share of Electronics and Computer software is 79.79% and merchandise exports share is 20.21%.

During the FY2021-22, State Level Single Window Clearance Committee (SLSWCC) approved is Rs.21,321.95 crore towards 447 projects, which is projected to generate employment of 1,22,403 in the state. State High Level Clearance Committee (SHLCC) also approved Rs.35,906.11 crore towards 13 projects, which is projected to generate employment of 11,137 in the state.

Karnataka accounts for a significant share in the total FDI that flows into India. Karnataka's share in total FDI inflow into India is USD 8,448.00 Million during 2020-21 (April to June-2021). Karnataka ranks third in the FDI inflows of the country.

MSMEs form an integral part of Industrialization in Karnataka. During 2021-22 (upto November 2021) 80,735 MSMEs have been registered in the state with an investment of Rs.2,934.84 crore and projected to provide employment to 6,51,934 person.

**STATE GOVERNMENT SUPPORT TO KSFC :**

During the FY 2021-22, the Government of Karnataka provided an equity capital of Rs.50.00 crore and interest subsidy of Rs.171.85 crore under various schemes

operated from KSFC as per details indicated below:

| | | |
|---|---|---|
| 1 | Scheduled Caste Entrepreneurs: | Rs.44.35 crore |
| 2 | Scheduled Tribe Entrepreneurs: | Rs.22.00 crore |
| 3 | Women Entrepreneurs: | Rs.58.00 crore |
| 4 | Interest Subvention Scheme for All Categories Entrepreneurs & First Generation Entrepreneurs: | Rs.47.50 crore |
| | **Total** | **Rs.171.85 crore** |

**SUBSIDIES & GRANTS-IN-AID :**

Under Textile Grant Scheme for Scheduled Caste and Scheduled Tribe Entrepreneurs, grant amount of Rs.25.15 crore was released by Government of Karnataka.

**IMPORTANT POLICY DECISIONS DURING FY 2021-22 :**

1. Extended restructuring facility under resolution frame work 2.0-resolution of Covid-19 related stress of MSMEs in line with RBI notification.
2. Implemented revised "Prudential norms on Income Recognition, Assets Classification and Provisioning pertaining to advances" [IRACP Norms]
3. Implemented compliance mechanisms as per 5th amendment to SEBI[LODR] Regulations 2015 including publication of quarterly results.
4. Re-introduction of interest subsidy scheme for women entrepreneurs for service sectors.
5. Prudential write-off of doubtful-II / loss assets.

## OPERATIONAL HIGHLIGHTS:

### SANCTIONS:

During the FY 2021-22, Sanction of loans under various schemes touched Rs.493.25 crore covering 461 cases as against Rs.401.66 crore covering 445 cases during FY 2020-21. Cumulative Sanctions reached Rs.18,779.63 crore covering 1,75,123 cases as on 31.03.2022.

### DISBURSEMENT :

During the FY 2021-22, the disbursement was Rs. 386.46 crore as against Rs.432.96 crore during FY 2020-21. The cumulative disbursement of the Corporation reached Rs.14,776.29 crore as on 31.03.2022.

### INVESTMENT, VALUE OF OUTPUT AND EMPLOYMENT :

The investment catalyzed by the Corporation during FY 2021-22 is expected to be Rs.2,601.82 crore resulting in value of output to Rs.1,633.93 crore and generating employment to 5,442 persons.

### RECOVERY :

During the FY 2021-22, the Corporation recovered an amount of Rs.741.89 crore as compared to Rs.638.68 crore recovered in the previous financial year. The Corporation realized recovery of Rs.55.84 crore in respect of Bad Debts {D-III (pre MOU), D-III/D-II (Prudential) & MR} during FY 2021-22.

**FINANCIAL RESULTS :**

During the financial year under review, the Corporation earned a gross revenue of Rs.359.02 crore as against Rs.360.90 crore in FY 2020-21. The Corporation achieved a record 'Profit before tax' of Rs.107.33 crore and net profit of Rs.66.61 crore for the FY 2021-22.

**DIVIDEND :**

Because of carry forward losses, during financial year no dividend is recommended to the shareholder of the Corporation.

**TREASURY ACTIVITY :**

During the year, the Government of Karnataka provided an equity capital of Rs.50.00 Crore as on 31-03-2022, the paid up equity capital of the Corporation stood at Rs 895.39 crore, as compared to previous year of Rs 795.39 Crore. During the year Rs.100.00 crore of share application money converted into share capital. The share application money as on 31.03.2022 stood at Rs 50.00 crore.

During the year, the Corporation redeemed bonds amounting to Rs.150.00 Crore. The outstanding of bonds decreased to Rs.700.00 Crore during the current year, which was Rs 850.00 crore as on 31.03.2021.

During the year, the Corporation has availed Term Loan of Rs.100.00 crore from State Bank of India. Further, the corporation has repaid Rs. 96.23 crores to State Bank of India and Rs 129.50 crore to Union Bank of India towards Term loan repayment.

The interest cost on bonds decreased to Rs.75.45 crore during the current year from Rs.85.80 crore for the previous year 2020-21. The decrease is on account of reduction of bond liability. Further, the Corporation has paid Rs.19.86 crore to State Bank of India and Rs.9.70 crore to Union Bank of India towards interest on term loan. The Corporation paid on cash basis, Rs.12.95 crore (net off of GST) to the State Government as guarantee commission during the year compared to Rs.15.81 crore (net off of GST) for the FY 2020-21.

The total long-term liability of the Corporation is decreased to Rs.1025.60 crore by the year end from Rs.1301.34 crore as on 31-03-2021. The total interest and financial expenses decreased to Rs.118.54 crore for the year 2021-22 from Rs.143.02 crore for the year 2020-21.

**BUSINESS DEVELOPMENT AND CREDIT RESEARCH:**

The major work of the department is to create awareness about special schemes made available for Micro, Small Scale Industries, Women and Scheduled Caste / Tribes and General entrepreneurs, conduct market survey reports, market study to analyse scope and demand, market viability of loan proposals and products etc., based on requirement of the branch offices / loan proposals.

The main focus of the department is to provide entrepreneur guidance to the customers on schemes and also entrepreneur development programmes.

**FINANCIAL SERVICE ACTIVITIES :**

KSFC is acting as a Corporate Agent for marketing of general insurance products. In this connection, the Corporation has entered into Memorandum of Understanding with M/s United India Insurance Company Ltd., and M/s IFFCO Tokio General Insurance Company Ltd. During the FY 2021-22, the Corporation has earned a commission of Rs.49.57 lakhs [from both the insurance companies] by giving a business of Rs.377.15 lakhs in the form of insurance premium.

**FUTURE OUTLOOK FOR FY 2022-23 :**

The COVID-19 pandemic has caused an unprecedented human and health crisis. The effects of lockdown period have severely crippled economic activities. During FY 2021-22 suitable measures were taken to control pandemic covid-19. Due to these measures, we can see positive sign in economic activities, financial inclusion would continue to be our policy priority. Reintroduction of modified interest subvention scheme and interest subsidy scheme for women entrepreneurs in 2021-22 would help MSMEs and service sectors which enabled the Corporation more loan sanction and disbursement.

**TARGET FOR FY 2022-23 :**

The Corporation for the financial year 2022-23 has set the following operational targets:

| | | |
|---|---|---|
| Sanction | : | Rs. 1010.00 |
| Disbursement | : | Rs. 710.00 |
| Recovery | : | Rs. 740.00* |

(*Including interest recovery of Rs.305.00 crore)

Concerted efforts will be made to achieve the target and to improve the working results of the Corporation.

**ACKNOWLEDGEMENTS:**

I take this opportunity to thank and express my gratitude to the Government of Karnataka for all the support extended for the settlement of small loans, interest subsidy and equity support.

My special thanks to SIDBI, RBI, Government of India, i.e., Department of Finance, Industries and Commerce, E-Governance, Social Welfare, Horticulture, Information and Public relations, information Technology, Women and Child Welfare for their continued support.

I express my sincere thanks to LIC of India, HDFC, SBI Life Insurance Company Limited, SHCIL, UIIC, IFFCO TOKIO General Insurance and Industrial Bodies viz: KASSIA, FKCCI, AWAKE, e-merg, COWE, CII & other industrial associations. I also express my thanks to the Commercial Banks, Apex Bank, KSSIDC, KIADB, KPTCL, VTPC, NSIC, MSME-DI and Karnataka Udyoga Mitra for their co-operation.

I would like to thank outgoing Directors Sri Ramesh Dharmaji, Sri V M Giridhar and Sri K N Rajanna for their guidance, support and contribution made during their tenure as directors.

I take this opportunity to thank the entrepreneurs for reposing faith in the Corporation, profuse gratitude to the shareholders for their unstinted support and the investors in the bond issues of the Corporation. I also thank State Bank of India and Union Bank of India for their timely sanction of term loans.

Finally, I wish to acknowledge the dedicated service and efforts of the officers and officials of the Corporation.

Date : 15-07-2022 **CHAIRMAN**
Place : Bangalore




**Karnataka State Financial Corporation**

'KSFC Bhavana', No. 1/1, Thimmaiah Road, Bengaluru - 560 052

Tel: 080 - 2226 3322 ✤ Fax: 080 - 2225 0126 / 2225 0136

contact.ksfc@karnataka.gov.in

www.ksfc.karnataka.gov.in @BengaluruKsfc


**Branch Offices : At all District Headquarters**

KSFC - *Your Partner in Progress*